ಮಹಾವೀರ ಕಾಸರ, ಶಿವಮೊಗ್ಗ

ದೇವರು ಗುಡ್ಡ, ಗಿರಿ, ಕಂದರಗಳಲ್ಲಿ ನೆಲೆಸಿದರೂ ಭಕ್ತರ ಕಾಟ ತಪ್ಪುವುದಿಲ್ಲವಲ್ಲ...?



ದೇವನದೇ ತಪ್ಪು. ಬೆಲ್ಲಕ್ಕೆ ‘ಇರುವೆಗಳದು ಕಾಟ’ ಎನ್ನುವ ಹಕ್ಕಿಲ್ಲ.

ವಿ. ಹಮೀದ್, ವಿಟ್ಲ

ಪತ್ನಿಯ ಅಬ್ಬರಕ್ಕೂ, ಸಾಗರದ ಅಬ್ಬರಕ್ಕೂ ಇರುವ ವ್ಯತ್ಯಾಸವೇನು ಸಾರ್?

ಪತ್ನಿಯದು ಕರ್ಣ ಮೃದಂಗ; ಸಾಗರದ್ದು ಮರಣ ಮೃದಂಗ.

ಕುಮಾರ ಚಲವಾದಿ, ಹಾಸನ

ಅಹಂಕಾರ ತೊರೆದವರೂ ಇದ್ದಾರೆಯೇ?

ಈಗಿಲ್ಲ. ತೀರಿಕೊಂಡರು. ಬೆಳಗೆರೆ ಕೃಷ್ಣಶಾಸ್ತ್ರಿಗಳು.

ದೇವೇಂದ್ರ, ಕಡೂರು

ಮಿತಿಮೀರಿ ಗಳಿಸಿದ ಸಂಪಾದನೆ ಸಂತಸಕ್ಕಿಂತ ದುಃಖ ತರುವುದೇ ಅಧಿಕವಂತೆ. ಹೌದಾ ಸಾರ್?




ನಿಜ. ಬಿಳಿಹಣವಾದರೆ ತೆರಿಗೆ ಸಂಕಟ; ಕಪ್ಪುಹಣವಾದರೆ ರೈಡ್‌ನ ಭಯ.

ಎ.ಕೆ. ಪಟ್ಟಾಭಿ, ಬೆಂಗಳೂರು

ಜನಸೇವೆ ಮಾಡಲು ಖಾದಿ, ಕಾವಿ, ಖಾಕಿಗಳಲ್ಲಿ ಯಾವುದು ಶ್ರೇಷ್ಠ?

ಹ್ಞ! ಜನಸೇವೆಗೆ ತೊಡುವ ಬಟ್ಟೆಯಲ್ಲ, ತೋರುವ ಬಟ್ಟೆ (ಬಟ್ಟೆ>ಒಟ್ಟೆ>ಮಾರ್ಗ) ಮುಖ್ಯ.

ಸಮತಾ, ತೆಲಂಗಾಣ

‘ರಾಮ’ ಎನ್ನುವುದು ಅಸಾಮಾನ್ಯ, ಅಸೀಮ ಬಲದ ಮಾನಸಿಕ ಸ್ಥಿತಿಯಂತೆ. ಹೌದೇ ರಾಮ್?

ಆ‘ರಾಮ’ ಸ್ಥಿತಿ ಹೊಂದುವವರಿಗೆ ಈ ವ್ಯಾಖ್ಯಾನ ಸರಿ; ಹ‘ರಾಮ’ಕ್ಕೆ ತಪ್ಪು.

ಬಿ. ಚಂದ್ರೇಗೌಡ, ಬೆಂಗಳೂರು

ಕುಡಿದಾಗಲೇ ಸತ್ಯ ಹೊರಬರುವ ರಹಸ್ಯವೇನು?

ಹೆಂಡ ಲಕ್ಷ್ಮಿ; ಸತ್ಯ ಸರಸ್ವತಿ. ಲಕ್ಷ್ಮಿ, ಸರಸ್ವತಿ ಒಂದೇ ಕಡೆ ಇರಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ಬೆಕ್ಕಿಗೆ ಗಂಟೆ ಕಟ್ಟುವ ಬದಲು ಬೆಕ್ಕನ್ನೇ ಕಟ್ಟಿಹಾಕುವುದು ಒಳ್ಳೆಯದಲ್ಲವೆ?

ಚೀನಾದಲ್ಲಂತೂ ಒಳ್ಳೆಯದು. ಬೆಕ್ಕು ಅವರಿಗೆ ಇಲಿ, ಹೆಗ್ಗಣ ಕಬಳಿಸುವ ಪ್ರತಿಸ್ಪರ್ಧಿ.

ದಿನೇಶ್, ಗುಡ್ಡದೂರು

ಹೆಣ್ಣನ್ನು ಚಿನ್ನಕ್ಕೆ ಹೋಲಿಸುವವರು ಗಂಡನ್ನೇಕೆ ಚಿನ್ನಕ್ಕೆ ಹೋಲಿಸುವುದಿಲ್ಲ?

ಏಕೆಂದರೆ ಜೀವನದಲ್ಲಿ ಪದೇ ಪದೇ ಒರೆಗೆ ಹಚ್ಚುವುದು ಹೆಣ್ಣನ್ನೇ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಧಾರಾವಾಹಿಯಲ್ಲಿರುವ ಪಾತ್ರಗಳು ಕಾಲ್ಪನಿಕವಾಗಿದ್ದರೂ, ಹೆಂಗಸರು ಅಳುವುದೇಕೆ?

ಮುಂದೊಮ್ಮೆ ಅದು ನಿಜವಾದರೆ ರೋದಿಸಲು ಇದು ರಿಹರ್ಸಲ್ ಅಂತೆ.

ಎಂ.ಬಿ. ರಂಗಪ್ಪಶೆಟ್ಟಿ, ಮೋಕಾ

ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ಬಲಿ ಕೊಟ್ಟ ಅಂದಿನ ನಾಯಕರಿಗೂ, ಇಂದಿನವರಿಗೂ ವ್ಯತ್ಯಾಸ?

ಅವರದು ಆತ್ಮಬಲಿಯಿಂದ ದೇಶೋದ್ಧಾರ; ಇವರದು ದೇಶಬಲಿಯಿಂದ ಆತ್ಮೋದ್ಧಾರ.

ಬೂಕನಕೆರೆ ವಿಜೇಂದ್ರ, ಮೈಸೂರು

ಗಂಡಸರ ಕಣ್ಣೀರಿಗಿಂತ ಹೆಂಗಸರ ಕಣ್ಣೀರಿಗೇ ಹೆಚ್ಚು ಶಕ್ತಿ ಇದೆಯಲ್ಲಾ.....?

ನಿಜ. ಕೊರಳಿನ ಕರೆಗಿಂತ ಕರುಳಿನ ಕರೆ ಶ್ರೇಷ್ಠ.

ಗಣಪತಿ ಕಂಚಿಪಾಲ, ತೆಲಂಗಾರ

ಹೆಂಡತಿಯ ಮನ ಗೆಲ್ಲೋದು ಹೇಗೆ ಅಂತ ಇಲ್ಲೊಬ್ಬರು ಕ್ಲಾಸ್ ಆರಂಭಿಸಿದ್ದಾರೆ. ತಾವೂ ಕ್ಲಾಸಿಗೆ ಬಂದರೆ...?

ಛೆ! ಅವರ ಹೆಂಡತಿಯ ಮನ ಗೆದ್ದು ನನಗೇನು ಪ್ರಯೋಜನ!

## ಬಹುಮಾನಿತ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ

ಡಯಾಬಿಟಿಸ್ ಬರುವ ಮುನ್ನ ಸಕ್ಕರೆಯೆಂದರೆ ವಾಕರಿಸುತ್ತಿದ್ದವರು ನಂತರ ಸಕ್ಕರೆಗೆ ಹಪಹಪಿಸುವುದೇಕೆ?

ನಾಲಿಗೆ ನಿಯಮ; ದೇಹಕ್ಕೆ ಕಷ್ಟ ಕೊಡುವುದೆಲ್ಲವೂ ನಾಲಿಗೆಗೆ ಇಷ್ಟ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಪತಿಯೇ ದೈವ. ಪತ್ನಿ ಸುದೈವ. ಮಕ್ಕಳು?

ಮುದ ನೀಡುವ Kinನರರು, ಪ್ರಶ್ನಿಸುವ ಯಕ್ಷರು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಲವರ್‌ಗೂ, ಲಿವರ್‌ಗೂ ಏನು ವ್ಯತ್ಯಾಸ?

ಲವರ್ ಕೈಕೊಟ್ಟರೆ ಮುಖೇಶನ ಹಾಡು; ಲಿವರ್ ಕೈಕೊಟ್ಟರೆ ತಮಿಳು ಬ್ಯಾಂಡು.

ಹೆಚ್.ಎಸ್. ಶಿವಶಂಕರ, ಬೆಂಗಳೂರು

ಈಗಿನ ಕನ್ನಡ ಸಿನಿಮಾಗಳು ಶುಕ್ರವಾರ ಬಿಡುಗಡೆಯಾಗಿ ಒಂದು ವಾರದಲ್ಲಿ ಮಾಯವಾಗುತ್ತಿವೆ. ಏಕೆ?



ವೀಕ್ಷಕನಿಗೆ ಗುರುವಾಗದೆ ಶನಿಯಾಗುವುದರಿಂದ ಬೇಗ ಮಂಗಳ ಹಾಡಬೇಕಾಗುತ್ತಂತೆ.

ನರಸಿಂಹ ಪೈ, ಹೊನ್ನಾವರ

ಮಹಿಳೆಯರು ಇಲ್ಲದ ಕ್ಷೇತ್ರ ಯಾವುದು?

ದೇಗುಲಗಳಲ್ಲಿ ತಲೆ ಬೋಳಿಸುವ ಕ್ಷೌರಿಕರ ಕ್ಷೇತ್ರ.

ಸಾಲಿಗ್ರಾಮ ದೇವರಾಜು, ಮೈಸೂರು

ಹೆಂಗಸರು ಬಗಲಲ್ಲಿ ಜಂಬದ ಚೀಲ ಇದ್ದಾಗ್ಯೂ ಮೊಬೈಲನ್ನು ಕಪಿಮುಷ್ಟಿಯಲ್ಲೇ ಇಟ್ಟುಕೊಳ್ಳುವುದೇಕೆ?

ಚೀಲದಲ್ಲಿದ್ದರೆ ರಿಂಗಾಗಿದ್ದು ಗೊತ್ತಾಗದೆ ‘ಕೈಗ್ಬಂದ್ Callಉ ಬಾಯ್ಗ್ ಬರ್ಲಿಲ್ಲ’ ಅಂತ ಆಗ್ಬಿಡತ್ತಲ್ಲ.

■ ರಾಮ್